**7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,**
**ಕಾರ್ಯನಿರ್ವಹಣೆ, ಪುತ್ತೂರು, ದ.ಕ.**

# ಸ್ಪೆಷಲ್ ಕೇಸ್ ನಂಬ್ರ 5010/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪೂವಪ್ಪ ಗೌಡ (ನೊಂದ ಬಾಲಕಿಯ ತಂದೆ) | ಪ್ರಾಸಾಃ 3 |
| ಗಂಡನ ಹೆಸರು | : | ಹರಿಯಪ್ಪ ಗೌಡ | ಚಾಸಾಃ 3 |
| ಪ್ರಾಯ | : | 56 ವರ್ಷ | **ದಿನಾಂಕಃ 10.06.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಶೆಟ್ಟಿಗದ್ದೆ ಮನೆ, ಕಲ್ಮಡ್ಕ ಗ್ರಾಮ, ಸ್ಯ ತಾಲೂಕು, ದ.ಕ. | |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ.1/ನೊಂದ ಬಾಲಕಿ ನನ್ನ ಮಗಳು. ಪ್ರಾಸಾ.2 ನನ್ನ ಹೆಂಡತಿ. ಚಾಸಾ.4 ನನ್ನ ದೊಡ್ಡ ಮಗಳು. ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಯಚ ನನಗೆ ಇರುತ್ತದೆ. ಆತ ನಮ್ಮ ಮನೆಯ ಎದುರಗಡೆ ಮನೆಯಲ್ಲಿ ವಾಸವಾಗಿರುತ್ತಾನೆ. ನಮ್ಮ ಮನೆ ಹಾಗೂ ಅವರ ಮನೆ ಮದ್ಯೆ ಒಂದು ರಸ್ತೆ ಇರುತ್ತದೆ. ನಮ್ಮ ಮನೆಯ ಕಂಪೌಂಡಿನಲ್ಲಿ ಒಂದು ಅಂಗಡಿಯನ್ನು ಹಾಕಿಕೊಂಡು ವ್ಯಾಪಾರ ಮಾಡುತ್ತಿರುತ್ತೇನೆ. ಪ್ರಾಸಾ.1 ರವರ ಜನ್ಮ ದಿನಾಂಕ 18.03.2009 ಆಗಿರುತ್ತದೆ.

2. ದಿಃ 26.09.2020 ರಂದು ರಾತ್ರಿ 08.10 ನಿಮಿಷ ಸಮಯದಲ್ಲಿ ಪಾಸಾ.1 ರವರು ಸ್ನಾನ ಮಾಡಲು ಹೋಗಿದ್ದಳು. ನಮ್ಮ ಮನೆಯ ಹೊರಡಗೆ ಎಡಗಡೆ ಭಾಗ ಸ್ನಾನ ಗೃಹ ಇರುತ್ತದೆ. ಅದಕ್ಕೆ ಸಿಮೆಂಟ

ಶೀಟ್‌ಗಳನ್ನು ಹಾಕಲಾಗಿರುತ್ತದೆ. ಆ ಸಂದರ್ಬದಲ್ಲಿ ಪ್ರಾಸಾ.1 ರವರು ಶವರನಲ್ಲಿ ನೀರು ಬರದೇ ಇದ್ದ ಕಾರಣ ಮೇಲೆ ನೋಡಿದಾಗ ಸ್ನಾನ ಗೃಹದ ದಕ್ಷಿಣ ದಿಕ್ಕಿನ ಗೋಡೆಯ ಮತ್ತು ಶೀಟ್‌ನ ಮದ್ಯದಲ್ಲಿ ಅಲ್ಲಿ ಒಂದು ಪೋನ್ ಇದ್ದದನ್ನು ಗಮನಿಸಿ ಬೊಬ್ಬೆ ಹಾಕುತ್ತ ಪ್ರಾಸಾ.2 ರನ್ನು ಕರೆದಳು. ಆಗ ನಾನು ಅಂಗಡಿಯಲ್ಲಿ ಇದ್ದೆ. ಆಗ ನಾನು ಮತ್ತು ಪ್ರಾಸಾ.2 ರವರು ಸ್ನಾನದ ಗೃಹದ ಹತ್ತಿರ ಓಡಿ ಹೋದೆವು. ಆಗ ನಾನ ನಮ್ಮ ಮನೆಯ ಸ್ನಾನದ ಗೃಹದ ಒಳಗಡೆ ಹೋಗಿ ಶೀಟಿನ ಅಡಿಯಲ್ಲಿ ಇಟ್ಟಂತಹ ಮೊಬೈಲ್‌ಗೆ ಕೈ ಹಾಕಲು ಹೋದೆ. ಆಗ ಆರೋಪಿ ಪೋನನ್ನು ತೆಗೆದುಕೊಂಡು ಹಿಂಬದಿಯಿಂದ ಒಡಿಹೋದರು. ಆಗ ಆರೋಪಿ ಸುಬ್ಬಯ್ಯ ರೈ ರವರ ಕಂಪೌಂಡ್‌ಗೆ ಹಾರಿ ಅವರ ಅವರ ಗೇಟ್ ಮುಖಾಂತರ ಅವರ ಮನೆಗೆ ಹೋದರು. ಆರೋಪಿಯು ಓಡಿ ಹೋದದ್ದನ್ನು ನಮ್ಮ ಮನೆಯ ಲೈಟ್, ರಸ್ತೆಯ ಲೈಟ್ ಹಾಗೂ ಸುಬ್ಬಯ್ಯ ರೈ ಮನೆಯ ಲೈಟ್ ನ ಬೆಳಕಿನಿಂದ ನೋಡಿದೆವು. ಆರೋಪಿ ಓಡಿ ಹೋಗಿ ತನ್ನ ಮನೆಯನ್ನು ಸೇರಿಕೊಂಡನು. ಆರೋಪಿ ಓಡುತ್ತಿರುವಾಗ ನಾನು ಶಾಮ್ ನಿಲ್ಲು ನಿಲ್ಲು ಎಂದು ಕೂಗುತ್ತಿದ್ದೆ. ಸದರಿ ದಿನಾಂಕದಂದು ಆರೋಪಿ ಮನೆಯಲ್ಲಿ ಒಬ್ಬನೆ ಇದ್ದದ್ದು ಅವರ ತಂದೆ ತಾಯಿ ಬೇರೆ ಊರಿಗೆ ಹೋಗಿದ್ದು ಇರುತ್ತದೆ.

4. ಮಾರನೆ ದಿನವಸ ನಾನು ಆರೋಪಿ ತಂದೆಗೆ ಪೋನ್ ಮಾಡಿ ಘಟನೆ ಬಗ್ಗೆ ವಿವರಿಸಿದೆ. ಆಗ ಆರೋಪಿ ತಂದೆ ನಾಳೆ ಬೆಳಿಗ್ಗೆ ಮಾತನಾಡೋನ ಎಂದರು. ಮಾರನೇ ದಿನ ಆರೋಪಿಯ ತಂದೆ ಬಂದು ನಾನು ಆರೋಪಿಗೆ ಬುದ್ದಿ ಹೇಳಿದ್ದೇನೆ. ನೀವು ಮುಂದು

ವರಿಯಬೇಡಿರಿ ಎಂದು ಹೇಳಿದರು.

5. ಅದೇ ದಿನ ಸಂಜೆ 04.30 ಗಂಟೆಗೆ ಆರೋಪಿಯು ನಮ್ಮ ತೋಟಕ್ಕೆ ಓಡಿ ಬಂದು ನಮ್ಮ ಅಪ್ಪನಲ್ಲಿ ವಿಷಯವನ್ನು ಏಕೆ ತಿಳಿಸಿರುತ್ತೀರಿ ಎಂದು ಕೇಳಿದನು. ಆಗ ನನ್ನ ಜೊತೆ ಚಾಸಾ.8 ರವರು ಇದ್ದರು. ಸದರಿ ಸಂದರ್ಭದಲ್ಲಿ ಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದ್ದನು. ಆಗ ಆರೋಪಿ ಮನೆಯಲ್ಲಿದ್ದ ಅವರ ತಾಯಿ ಆರೋಪಿಗೆ ಉದ್ದೇಶಿಸಿ ನಿನ್ನ ತಂದೆ ಮಾತನಾಡಿ ಮುಗಿಸಿದ್ದಾರೆ ಎಂದು ಹೇಳಿದ್ದು ಇರುತ್ತದೆ. ಹಾಗೂ ಆದಿತ್ಯ ಮತ್ತು ಅಕ್ಷಯ ಎಂಬ ಹುಡುಗರು ಆರೋಪಿಯನ್ನು ಎಳೆದುಕೊಂಡು ಹೋಗಿದ್ದು ಇರುತ್ತದೆ.

6. ದಿಃ 26.09.2020 ರ ಪೂರ್ವದಲ್ಲಿ ಚಾಸಾ.4 ರವರು ಸ್ನಾನ ಮಾಡುತ್ತಿರುವ ಸಂದರ್ಭದಲ್ಲಿ ಆರೋಪಿಯು ಮೊಬೈಲ್ ನ ಲೈಟನ್ನು ಸ್ನಾನದ ಗೃಹದ ಕಡೆ ಹಾಕಿದ್ದರು ಎಂದು ನನ್ನ ಬಳಿ ಹೇಳಿದ್ದರು. ಆರೋಪಿ ತನ್ನ ಮನೆಯ ಮಹಡಿಯಿಂದ ನನ್ನ ಮಕ್ಕಳಾದ ಪ್ರಾಸಾ.1 ಮತ್ತು ಚಾಸಾ.4 ರವರಿಗೆ ಕೈ ಸನ್ನೆ ಮಾಡುತ್ತಿದ್ದ ಎಂದು ನನಗೆ ತಿಳಿಸಿರುತ್ತಾರೆ. ಸದರಿ ಘಟನೆಗೆ ಸಂಬಂಧಿಸಿದಂತೆ ಪ್ರಾಸಾ.2 ರವರು ಬೆಳ್ಳಾರೆ ಪೋಲಿಸ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ.

7. ನಂತರ ಪೋಲಿಸರು ನನ್ನನ್ನು ಮಂಗಳೂರಿನ CEN Police Station ಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸಂದರ್ಬದಲ್ಲಿ ಚಾಸಾ.7 ರವರು ನನ್ನ ಜೊತೆ ಇದ್ದರು. CEN ಪೋಲಿಸರು ಆರೋಪಿಯಿಂದ ಅಮಾನತ್ತುಗೊಳಿಸಿದ ಫೋನನ್ನು ನಮ್ಮ ಸಮಕ್ಷಮದಲ್ಲಿ ಬಿಚ್ಚಿದ್ದು ಇರುತ್ತದೆ. ಪೋಲಿಸರು ಮನೆಗೆ ಬಂದು

ಪಂಚನಾಮೆಯನ್ನು ಮಾಡಿರುತ್ತಾರೆ ಮತ್ತು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಕೆ. ವಕೀಲರಿಂದಃ</u>**

ಕಾಲಾವಕಾಶ ಕೋರಿದ್ದು, ಕಾಲಾವಕಾಶವನ್ನು ನೀಡಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ನುಡಿ ಸಾಕ್ಷ್ಯವನ್ನು ಕ್ಯಾಮೆರಾ ಪ್ರೊಸೀಡಿಂಗ್ಸ್ ನಲ್ಲಿ ದಾಖಲಿಸಿಕೊಳ್ಳಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು. (Sitting at Puttur).